**ಈ ಕಾದಂಬರಿಯ ಇನ್ನೊಂದು ಹೊಸತನವೆಂದರೆ ಕೇಂದ್ರದಲ್ಲಿರುವ ಹನ್ನೆರಡು ಮಂದಿಯಲ್ಲಿ ಎಲ್ಲರೂ ಸ್ತ್ರೀಯರು, ಕರಿಯರು ಎಂದೇ ವರ್ಗೀಕರಿಸಬಹುದಾದವರು ಮತ್ತು ಸದ್ಯಕ್ಕೆ ಬ್ರಿಟನ್ನಿನಲ್ಲಿರುವವರು.**

ಕಲಿಯಬೇಕಾಗಿದೆ ಅಥವಾ ಇಂಥ ಮಕ್ಕಳಿದ್ದರೆ ನಿಶ್ಚಿಂತೆಯಿಂದಿರಬಹುದು ಎನ್ನುವಷ್ಟು ಹೊಸತಳಿಯ ಪಾತ್ರಗಳಿವು. ಅಂದಮಾತ್ರಕ್ಕೆ ಈ ಮಾತು ಇಲ್ಲಿನ ಎಳೆಯ ಪಾತ್ರಗಳ ಬಗ್ಗೆ ಎಂದೇನೂ ತಿಳಿಯಬೇಕಾಗಿಲ್ಲ. ಅರವತ್ತರ ಆಸುಪಾಸಿನ ಪಾತ್ರಗಳಿಂದ ಹಿಡಿದು ಇನ್ನೂ ಕಲಿಯುತ್ತಿರುವ ಹದಿಹರಯದ ಪಾತ್ರಗಳೂ ಸೇರಿಗೆ ಸವ್ವಾಸೇರು ಎಂಬಂತಿವೆ. ಒಂದು ತಲೆಮಾರು ಇನ್ನೊಂದರ ಬಗ್ಗೆ ವಿಸ್ಮಯದಿಂದಲೇ ನೋಡುತ್ತಿರಬೇಕಾದ ಅನಿವಾರ್ಯವನ್ನು ಇವು ಕಾಣಿಸುತ್ತಿವೆ. ಹಾಗೆಯೇ ಇಲ್ಲಿನ ನಿರೂಪಣೆಯಲ್ಲೂ ಹೊಸತನವಿದೆ. ಸಾಂಪ್ರದಾಯಿಕ ವಾಕ್ಯದ ಪೂರ್ಣವಿರಾಮ, ಅಲ್ಪವಿರಾಮ, ವಾಕ್ಯದ ಆರಂಭ ಸೂಚಿಸುವ ಕ್ಯಾಪಿಟಲ್ ಲೆಟರ್ ನಿರೀಕ್ಷಿಸಬೇಡಿ. ಇದೊಂದು ಕಾವ್ಯದ ಲಯವುಳ್ಳ, ಗದ್ಯ ಕಾದಂಬರಿ. ಹಾಗಾಗಿಯೇ ಇದರ ನಿರೂಪಣೆಯಲ್ಲೇ ಒಂದು ವಿಧವಾದ ತೀವ್ರತೆಯಿದೆ. ತೀವ್ರವಾಗಿದ್ದೂ ವೈಯಕ್ತಿಕ ಗೋಳಿನ ಪ್ರವರದಲ್ಲಿ ಮುಳುಗದೆ ಸಾಮಾಜಿಕ, ರಾಜಕೀಯ, ಆರ್ಥಿಕ ಆಯಾಮಗಳಿಗೆಲ್ಲ ಒಡ್ಡಿಕೊಂಡು ಕೊಡುವ ಚಿತ್ರ ಗಹನವಾದ ಸಂಕೀರ್ಣತೆ ಹೊಂದಿದೆ, ಕೃತಿಯಾಗಿ ತನ್ನ ಮಹತ್ವಾಕಾಂಕ್ಷೆಯನ್ನು ಮೆರೆದಿದೆ. ಹಾಗಿದ್ದೂ ನಿರೂಪಣೆಯ ವಿಟ್ ಮತ್ತು ವಿಸ್ಡಮ್ ನಿಲುಕಿದರೆ ಇದನ್ನು ಓದುವುದೇ ಒಂದು ಸುಖ. ಇಲ್ಲವಾದಲ್ಲಿ ದೊಡ್ಡ ಗೊಂದಲ. ಇಲ್ಲಿನ ಭಾಷೆ, ಆಡುಭಾಷೆ. ಇದನ್ನು ಅಂತರರಾಷ್ಟ್ರೀಯ ಓದುಗರಿಗಾಗಿ ಬರೆದಂತಿಲ್ಲ ಎನ್ನುವುದೇ ಇದರ ಸೊಗಡು ಮತ್ತು ಆಕರ್ಷಣೆ. ಅದೇ ರೀತಿ ಈ ಕಾದಂಬರಿಯ ಇನ್ನೊಂದು ಹೊಸತನವೆಂದರೆ ಕೇಂದ್ರದಲ್ಲಿರುವ ಹನ್ನೆರಡು ಮಂದಿಯಲ್ಲಿ ಎಲ್ಲರೂ ಸ್ತ್ರೀಯರು, ಕರಿಯರು ಎಂದೇ ವರ್ಗೀಕರಿಸಬಹುದಾದವರು ಮತ್ತು ಸದ್ಯಕ್ಕೆ ಬ್ರಿಟನ್ನಿನಲ್ಲಿರುವವರು. ಸ್ತ್ರೀವಾದಿಗಳಂತೆ ಕಾಣುವ ಇವರೆಲ್ಲರೂ ಲೈಂಗಿಕವಾಗಿ ಕೊಂಚ ವಿಪರೀತಕ್ಕಿಟ್ಟುಕೊಂಡವರು. ಇವರ ಇತಿಹಾಸ, ಚರಿತ್ರೆ, ಚಾರಿತ್ರ್ಯ, ಕತೆ, ಗೋಳು, ನೋವು ಮತ್ತು ಕಾಠಿಣ್ಯ, ಪ್ರಬುದ್ಧತೆ ಮತ್ತು ಸಂವೇದನಾಶೀಲತೆ ಕೃತಿಯ ಆಳಕ್ಕಿಳಿದಂತೆಲ್ಲ ನಮ್ಮನ್ನೇ ಬದಲಾಯಿಸುತ್ತ ಹೋಗುತ್ತದೆ ಎನ್ನುವುದು ಸತ್ಯ. ಹಾಗಾಗಿ ಇದು ಒಂದು ಮಹಾನ್ ಕೃತಿ, ಓದಲೇ ಬೇಕಾದ ಕಾದಂಬರಿ.

ಆದರೆ ಭಾವತೀವ್ರತೆಯೊಂದಿಗೇ ಬರುವ ಕೆಲವು ದೌರ್ಬಲ್ಯಗಳಿಂದ ಈ ಕೃತಿ ಮುಕ್ತವಾಗಿಲ್ಲ. ಅಂದರೆ, ಉದ್ದಕ್ಕೂ ಸ್ತ್ರೀವಾದಿ ನಿಲುವು ಎನ್ನುತ್ತ ಈ ಕೃತಿ ಬದುಕಿನ ಎಲ್ಲ ರಂಗಕ್ಕೂ ಮುಕ್ತವಾಗಿಲ್ಲ, ಹಾಗೆ ಮುಕ್ತವಾಗಿ ತೆರೆದುಕೊಂಡು ಸಮಸ್ಯೆಯನ್ನು ಕಾಣುತ್ತಿಲ್ಲ, ಕೆಲವು ನಿರ್ದಿಷ್ಟ ಸಂಗತಿಗಳನ್ನಷ್ಟೇ ಅತಿರೇಕಕ್ಕೊಯ್ದಿದೆ ಎನ್ನುವವರೂ ಇದ್ದಾರೆ ಮತ್ತು ಅದು ಸ್ವಲ್ಪ ಮಟ್ಟಿಗೆ ನಿಜ. ಸಲಿಂಗರತಿ, ಜನಾಂಗೀಯವಾದ ಇಲ್ಲಿ ಸ್ವಲ್ಪ ಅತಿಯಾಗಿದೆ. ಹಾಗೆಯೇ ತೆರೆದ ಮನಸ್ಸಿನಿಂದ ಜಗತ್ತನ್ನು ಕಾಣಲಾರದ ಮಟ್ಟಿಗೆ ಇಸಮ್ಮುಗಳಿಗೆ ಬುದ್ಧಿ ಅಡವಿಟ್ಟರೆ ಹುಟ್ಟಿಕೊಳ್ಳುವ ಅತಿರೇಕಗಳನ್ನೂ ನಾವು ಈ ಕಾದಂಬರಿಯಲ್ಲಿ ಕಾಣುತ್ತೇವೆ ಎನ್ನುವುದು ಸುಳ್ಳಲ್ಲ.